ಪಿ.ಡಬ್ಲ್ಯೂ ಃ **2**

ಸಾಕ್ಷಿಗೆ ದಿನಾಂಕಃ **12.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಎದುರುದಾರರ ಪರ **:** ಶ್ರೀ ವಕೀಲರಿಂದ

ಅರ್ಜಿದಾರರು ನನ್ನ ಪತಿಯಾಗಿರುತ್ತಾರೆ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಾನು ಸದರಿ ಕಾಲಕ್ಕೆ ಇರಲಿಲ್ಲ. ಅರ್ಜಿದಾರರು ಅವರಿಗೆ ಸೇರಿದ ಸ್ಕೂಟರ್‌ನಲ್ಲಿ ಆ ದಿನ ಹೋಗುತ್ತಿದ್ದರು. ಅರ್ಜಿದಾರರಿಗೆ ಸ್ಕೂಟರ್ ಚಾಲನೆ ಮಾಡಲು ಡಿ.ಎಲ್. ಇರಲಿಲ್ಲ. ಸದರಿ ಸ್ಕೂಟರ್‌ಗೆ ಅದು ಹೊಸದು ಆದ ಕಾರಣ ವಿಮೆ ಇರಬಹುದು. ಅರ್ಜಿದಾರರಿಗೆ ಸರಿಯಾಗಿ ಸ್ಕೂಟರ್‌ನ್ನು ಚಾಲನೆ ಮಾಡಲು ಗೊತ್ತಾಗದೇ ರಸ್ತೆಯನ್ನು ದಾಟುವಾಗ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಣ್ಣಪುಟ್ಟ ಗಾಯಗಳು ಆಗಿತ್ತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತಲೆಗೆ ಪೆಟ್ಟಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಮೊದಲು ಅರ್ಜಿದಾರರನ್ನು ನೋಡಲು ಹೋಗಿದ್ದೆ. ಸದರಿ ಆಸ್ಪತ್ರೆಯಲ್ಲಿ ಅರ್ಜಿದಾರರು ಸುಮಾರು ಒಂದುವರೆ ಗಂಟೆಯ ಕಾಲ ಇದ್ದರು. ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ಶಿವಣ್ಣ ರವರು ವೈದ್ಯರಿಗೆ ಹೇಳಿರುತ್ತಾರೆ. ನಂತರ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಅರ್ಜಿದಾರರು **15** ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ಅರ್ಜಿದಾರರ ಕಾಲಿನಲ್ಲಿ ಈಗಲೂ ಸಹ ರಾಡು ಇರುತ್ತದೆ. ಇತ್ತೀಚೆಗೆ ಅರ್ಜಿದಾರರು ಕೊನೆಯದಾಗಿ ಜನವರಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಬಾಲಕೃಷ್ಣೇಗೌಡ ಮತ್ತು ಬೋಪಯ್ಯ ವೈದ್ಯರು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತಾರೆ.

**2.** ಅರ್ಜಿದಾರರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅವರು ನಿವೃತ್ತಿಯಾಗಿ ಮೂರುವರೆ ಯಿಂದ ನಾಲ್ಕು ವರ್ಷಗಳು ಕಳೆದಿರುತ್ತದೆ. ಅಪಘಾತವಾದ ದಿನದಿಂದ ನಿವೃತ್ತಿಯಾಗುವವರೆಗೆ ಅರ್ಜಿದಾರರು ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ನಾವು ಕರೆದುಕೊಂಡು ಹೋಗಿ ವಾಪಸ್ ಕರೆದುಕೊಂಡು ಬರುತ್ತಿದ್ದೆವು. ಅರ್ಜಿದಾರರು ರಜೆಯಲ್ಲಿದ್ದಾಗ ವೇತನವನ್ನು ನೀಡಿರುವುದಿಲ್ಲ. ಈ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾವು ಖರ್ಚು ಮಾಡಿರುತ್ತೇವೆ ಎಂದು ಹೇಳುವ **8** ಲಕ್ಷ ರೂಪಾಯಿಯನ್ನುಸರ್ಕಾರದಿಂದ ನೀಡಿರುತ್ತಾರೆ ಎಂದರೆ **2,60,000/-** ರೂಪಾಯಿಗಳನ್ನು ನೀಡಿರುತ್ತಾರೆ. ಅರ್ಜಿದಾರರಿಗೆ ವೇತನ ಬರುತ್ತಿದ್ದ ಬಗ್ಗೆ ಬ್ಯಾಂಕ್ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅರ್ಜಿದಾರರ ಕೈಕಾಲುಗಳು ಸ್ವಾಧೀನ ಕಳೆದುಕೊಂಡಿದ್ದು, ಅವರಿಗೆ ಕುತ್ತಿಗೆ ನೋವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಬಾಡಿಗೆ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇವೆ. ಅರ್ಜಿದಾರರಿಗೆ

ಸಂಬಂಧಿಸಿದ ಒಂದು ಎಕರೆ ಸ್ವತ್ತು ಭೂಗತಗಳ್ಳಿ ಗ್ರಾಮದಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಇರುವುದಿಲ್ಲ. ಜಮೀನು ಇರುವುದಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಅಪಘಾತ ಕಾಲಕ್ಕೆ ಅರ್ಜಿದಾರರಿಗೆ **60** ಸಾವಿರ ರೂಪಾಯಿ ವೇತನ ಬರುತ್ತಿತ್ತು. ನಿವೃತ್ತಿ ಕಾಲಕ್ಕೆ ಅರ್ಜಿದಾರರಿಗೆ ಸುಮಾರು **70** ಸಾವಿರ ರೂಪಾಯಿ ವೇತನ ಬರುತ್ತಿತ್ತು. ಈಗ **35** ಸಾವಿರ ರೂಪಾಯಿ ಪಿಂಚಣಿ ಬರುತ್ತದೆ. ಅರ್ಜಿದಾರರು ಮುಖ್ಯ ಶಿಕ್ಷಕರು ಆಗಿದ್ದರು. ಅಪಘಾತವು ಅರ್ಜಿದಾರರ ತಪ್ಪಿನಿಂದ ಆಗಿದ್ದು, ಸದರಿ ಸ್ಕೂಟರ್‌ಗೆ ದಾಖಲೆಗಳು ಇಲ್ಲದೇ ಇರುವ ಕಾರಣ **1** ನೇ ಎದುರುದಾರರ ವಾಹನವನ್ನು ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.